International Journal of Kannada Research
www.kannadajournal.com

ISSN: 2454–5813
IJKR 2018; 4(2): 73-76
© 2018 IJKR
www.kannadajournal.com
Received: 16-02-2018
Accepted: 17-03-2018

**ಡಾ॥ ಚನ್ನಮ್ಮ. ಎನ್.ಅಲ್ಲಾ**
ಎಂ.ಎ.ಪಿಎಚ್.ಡಿ. ಪ್ರಾಚಾರ್ಯರು,
ಬಸವ ವಿಜ್ಞಾನ ಮತ್ತು ವಾಣಿಜ್ಯ
ಪದವಿ ಮಹಾವಿದ್ಯಾಲಯ,
ಕಲಬುರಗಿ

**Correspondence**
**ಡಾ॥ ಚನ್ನಮ್ಮ. ಎನ್.ಅಲ್ಲಾ**
ಎಂ.ಎ.ಪಿಎಚ್.ಡಿ. ಪ್ರಾಚಾರ್ಯರು,
ಬಸವ ವಿಜ್ಞಾನ ಮತ್ತು ವಾಣಿಜ್ಯ
ಪದವಿ ಮಹಾವಿದ್ಯಾಲಯ,
ಕಲಬುರಗಿ

# ಭಕ್ತಿಯ ಪ್ರೇರಕ : ಕಾಲಜ್ಞಾನಿ ಕನಕ

**ಡಾ॥ ಚನ್ನಮ್ಮ. ಎನ್.ಅಲ್ಲಾ**

ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕರಿಸಿ,
ಲಿಂಗವೆಂಬ ಎಲೆಯಾಯಿತ್ತು !
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತೆಯೆಂಬ ಹಣ್ಣಾಯಿತ್ತು !
ನಿಷ್ಪತ್ತೆಯೆಂಬ ಹಣ್ಣು
ತೊಟ್ಟುಬಿಟ್ಟು ಕಳಚಿ ಬಿಳುವಲ್ಲಿ
ಕೂಡಲಸಂಗಮದೇವನು
ತನಗೆ ಬೇಕೆಂದತ್ತಿಕೊಂಡನು !

ಇದು ಭಕ್ತಿ ಭಂಡಾರಿ ಬಸವಣ್ಣನ ಭಕ್ತಿಯ ಚಿಂತನೆ, ಈಗಾಗಲೆ ನಮಗೆ ಗೊಚರಿಸಿದಂತೆ 12ನೇ ಶತಮನಾದ ಕಾಲ ಭಕ್ತಿಯ ಕಾಲ ಎಂದರೆ ಅತಿಶಯೋಕ್ತಿಯೆನಲ್ಲಾ, ಧರ್ಮ ಮತ್ತು ಸಮಾಜ ಇವೆರಡು ಈ ಶತಮಾನದಲ್ಲಿ ಗತಿಸಿ ಹೊದಂತಹ ಪ್ರಮುಖ ಪರಿಕಲ್ಪನೆಗಳು, ಇದನ್ನೆ ಬಸವ ಪೂರ್ವ ಯುಗದಲ್ಲಿ ದಾರ್ಮಿಕ ಮತ್ತು ಲೌಕಿಕ ಎಂಬ ಶಬ್ದಗಳಿಗೆ ಸರಕವಾಗಿದ್ದು ಆದರೆ ಧರ್ಮದ ಪರಿಕಲ್ಪನೆ ಲೌಕಿಕದ ಒಳಗಡೆ ಇದ್ದುಕೊಂಡು ಧರ್ಮದಡಿಯಲ್ಲಿ ನಿರ್ಧರಿಸಿದ ವಿಧಿವಿಧಾನಗಳಿಗೆ ಕಟ್ಟುಬಿದ್ದುದ್ದು ಈ ಕಾಲದಲ್ಲಿ. ಹೀಗಾಗಿ ಯಾವ ಧರ್ಮ ಜೀವಪರ ಆಲೋಚನೆಗೆ ಮಿಡಿಯದೆ ಇದ್ದುದರಿಂದ ಬೌದ್ಧಧರ್ಮ, ಮಹಾವೀರನಿಂದ ಜೈನಧರ್ಮ, ಮತ್ತು ಬಸವಾದಿ ಪ್ರಮಥರಿಂದ ವಿರಶೈವ ಧರ್ಮ ಈ ಮೂರು ಧರ್ಮಗಳ ಹುಟ್ಟಿಗೆ ಕಾರಣ ವೈದಿಕ ಧರ್ಮದ ಆಗೋಚರ ಸೃಷ್ಟಿಯ ನಿಯಮಗಳೆ ಆಗಿದ್ದವು ಹೀಗಾಗಿ ಚಳವಳಿ, ಆಂದೋಲನ, ಕ್ರಾಂತಿ ಮತ್ತು ಸಮಾಜೋಧಾರ್ಮಿಕ ಚಿಂತನಮುಖಿ ಸಾಹಿತ್ಯ ಎಂಬ ಹೆಸರು ಪಡೆದಿದ್ದು, ವಚನ ಸಾಹಿತ್ಯ ಅಥವಾ ಭಕ್ತಿ ಸಾಹಿತ್ಯ.

ಬಸವಾದಿ ಪ್ರಮಥರಲ್ಲಿ ಅನೇಕ ಶರಣರು–ಶರಣಿಯರು ತಮ್ಮ ದಿನ ನಿತ್ಯದ ಕಾಯಕದೊಂದಿಗೆ ಭಕ್ತಿಯ ಸಾಂಕೇತಿಕವಾಗಿ ತಮ್ಮ ಅಂತರಂಗದೊಳಗೆ ಇಷ್ಟ ದೈವ ಸಂಕಲ್ಪನೆಯನ್ನು ಕಂಡಂತಹ ನಿದರ್ಶನಗಳಿವೆ, ಹೀಗಾಗಿ ಇವರ ತರುವಾಯ ಬಂದಂತಹ ಭಕ್ತಿಯ ಪ್ರತೀಕ ಎಂದರೆ ದಾಸರು ಇದು ವಚನ ಸಾಹಿತ್ಯದಂತೆಯೇ ಅನೇಕ ದಾಸರನ್ನೊಳಗೊಂಡು, ಭಕ್ತಿಯ ಪರಂಪರೆಯನ್ನೆ ಹುಟ್ಟು ಹಾಕಿತು. ಇದು ಇನ್ನೆನು ಧರ್ಮದಿಂದಾಗಿ ಸಮಾಜ ಒಡೆದು ಹೋಗುತ್ತೇನು? ಎನ್ನುವಂತಹ ಸ್ಥಿತಿಯಲ್ಲಿ ಉದ್ಭವಿಸಿತು. ತಾಳ, ಲಯ, ಮತ್ತು ದಾಟಿಗಳನ್ನು ಇಟ್ಟುಕೊಂಡು ತಂಬೂರಿಯೊಂದಿಗೆ ಕಿರ್ತನೆಗಳನ್ನು ಮನಮನಸ್ಸಿನೊಳಗೆ ತುಂಬಲು ಪ್ರೆರೆಪಿಸಿದೆ, ಹೀಗಾಗಿ ಈ ಸಾಹಿತ್ಯಾಂಶ ಕಾಲಘಟ್ಟ ಅನೇಕ ಗುರು ಪರಂಪರೆಯೊಂದಿಗೆ ಅದರ ಜೋತೆಗೆ ಭಕ್ತಿಯ ಪ್ರತಿನಿಧಿಯಾಗಿ ಗೋಚರಿಸಿತು.

ಕೀರ್ತನೆ ಎಂದರೆ ದೇವರನಾಮ, ಹಾಡಿ ಹೊಗಳುವ ವಿಧಾನ, ಹರಿಯ ವರ್ಣನೆ ಎಂದರ್ಥವಾಗುತ್ತದೆ. ಇದು ಸಂಗೀತ ಸಾಹಿತ್ಯ ನೃತ್ಯ ಕಲೆಯೊಂದಿಗೆ ಸಾಮರಸ್ಯ ಹೊಂದಿರುವ ಕಲೆಯೇ ಆಗಿದೆ. ಭಕ್ತನು ಮಾಡುವ ದೈವೀ ವರ್ಣನೆ, ಭವ ಬಂಧನದಿಂದ ಬಿಡಿಸು ಎನ್ನುವ ನಿವೇದನೆ ಎಂದಾಗುತ್ತದೆ. ಇದರ ಮುಖ್ಯಭಾವ ಭಕ್ತಿ. ಏಕದೇವ ನಿಷ್ಠೆ, ಅದೇ

ಅವರ ಇಷ್ಟದೈವ ಹೀಗಾಗಿ ಕೀರ್ತನೆಗಳ ಮುಖ್ಯ ಗುರಿ ಭಗವಂತನ ಆರಾಧನೆ ಆ ಮುಖಾಂತರ ಆಧ್ಯಾತ್ಮಿಕ ಔನ್ನತ್ಯಕ್ಕೇರುವ ಹಂಬಲ.

ಕನ್ನಡದಲ್ಲಿ ಕೀರ್ತನೆ ಸಾಹಿತ್ಯಕ್ಕೆ ಬಹುದೊಡ್ಡ ಐತಿಹಾಸಿಕ ಪರಂಪರೆಯಿದೆ. ಕನ್ನಡದಲ್ಲಿ ಮೊಟ್ಟ ಮೊದಲು ಕಾಣಿಸಿಕೊಳ್ಳುವ ಹಾಡು, ಮೇಲ್ವಾಡು, ಭಾಜನೆಗಬ್ಬಗಳು, ಕೀರ್ತನೆಯ ರೂಪಗಳು. ಕೀರ್ತನೆಯ ಕಾಲ ಹದಿನೈದನೆಯ ಶತಮಾನ ಇದು ದಾಸ ಸಾಹಿತ್ಯದ ಸುವರ್ಣಯುಗ. ಹನ್ನೆರಡನೆಯ ಶತಮಾನದ ಶರಣರ ನಂತರ ಕನ್ನಡದಲ್ಲಿ ಭಕ್ತಿ ಸಾಹಿತ್ಯದ ಹೊಸಗಾಳಿ ಬೀಸತೊಡಗಿತು. ದಾಸರು ಹರಿಭಕ್ತಿಯ ಹಿನ್ನೆಲೆಯಿಂದ ವ್ಯಕ್ತಿ ಹಾಗೂ ಸಮಾಜದ ಜನಪರ ಕಾಳಜಿಯತ್ತ ಸಾಗುವುದೇ ಅವರ ಪರಮ ಗುರಿಯಾಗಿತ್ತು. ಅದಕ್ಕಾಗಿ ಅವರು ಶರಣರಂತೆಯೇ ಜನಸಾಮಾನ್ಯರಿಗೆ ಅರ್ಥವಾಗುವ ಸರಳ ಭಾಷೆಯನ್ನು ತಮ್ಮ ಸಾಹಿತ್ಯದ ಮಾಧ್ಯಮವನ್ನಾಗಿಸಿಕೊಂಡರು.

'ಕೀರ್ತನೆ' ಎನ್ನುವುದು ಒಂದು ಸಾಹಿತ್ಯದ ರೂಪವಾಗಿ ಅರಳಿ ನಿಂತದ್ದು, ವ್ಯಾಸರಾಯರು ಮತ್ತು ಅವರ ಶಿಷ್ಯಂದಿರಾದ ಪುರಂದರದಾಸ, ಕನಕದಾಸರಲ್ಲಿ ಕೀರ್ತಿ ಸಾಹಿತ್ಯದ ಗಂಗೆ ಓತಪ್ರೋತವಾಗಿ ಹರಿದಳು. ಕೀರ್ತನೆಗಳ ಮುಖ್ಯ ಧ್ಯೇಯ ಭಕ್ತಿ. ಅದರಲ್ಲಿ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ದನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮ ನಿವೇದನೆಗಳೆಂಬ ನವವಿಧ ಭಕ್ತಿ ಅದ್ಬುತವಾದದ್ದು, ಇದರ ಜೊತೆಗೆ ನೀತಿಬೋಧೆ, ಸಾಮಾಜಿಕ ಪ್ರಜ್ಞೆ, ವಿಡಂಬನೆ ಮುಂತಾದ ಮೌಖಿಕ ವಿಚಾರಗಳು ಸೇರಿವೆ. ಇಲ್ಲಿ ಶ್ರೀಪಾದರಾಯರು, ನರಹರಿ ತೀರ್ಥರು, ಪುರಂದರದಾಸರು, ವಾದಿರಾಜರು, ರಾಮದಾಸರು, ಜಗನ್ನಾಥದಾಸರು ಮುಂತಾದವರ ದಾಸ ಪರಂಪರೆಯಲ್ಲಿ ಕನಕದಾಸರು ಕಾಲಜ್ಞಾನಿಯೇ ಎಂದು ಹೆಸರು ಪಡೆದರು ಹಾಗೂ ಕಾಲಜ್ಞಾನಿ ಕನಕರೆಂದು ಪ್ರಸಿದ್ಧಿಯಾದರು. ಇವರ ಕೀರ್ತನೆಗಳ ಅಂಕಿತ ಮತ್ತು ಇಷ್ಟದೈವ 'ಕಾಗಿನೆಲೆಯಾದಿಕೇಶವ'

ಕನಕದಾಸರ ಸಾಹಿತ್ಯ ಸೈದ್ಧಾಂತಿಕತೆ, ವೈಚಾರಿಕತೆ ಹಾಗೂ ಸಮಾಜಮುಖಿ ಚಿಂತನೆಯಲ್ಲಿ ಅವರ ಬಹಳಷ್ಟು ಕೀರ್ತನೆಗಳು ಸಾಕ್ಷಿಯಾಗಿ ನಿಂತಿವೆ. ಅಷ್ಟೇ ಅಲ್ಲದೆ ದಾಸರಲ್ಲಿ ವೈಜ್ಞಾನಿಕತೆಯ ಮನೋಭಾವನೆ ಅತ್ಯಂತ ಸೂಕ್ಷ್ಮ ಮತ್ತು ನೇರ ನುಡಿಗಳಿಂದ ಖಂಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕಿರ್ತನೆಗಳಲ್ಲದೆ ನಳಚರಿತೆ, ಮೊಹನತರಂಗಿಣಿ, ಹರಿಭಕ್ತಿಸಾರ, ರಾಮದಾನ ಚರಿತೆ, ಹೀಗೆ ಮಹತ್ವದ ಕಾವ್ಯಗಳನ್ನು ಕೊಡುವದರ ಮೂಲಕ ಅನನ್ಯ ಭಕ್ತಿಯಿಂದ ಕನಕಕಿಂಡಿ ಎಂಬ ಚರಿತ್ರೆಯ ನಿರ್ಮಾಪಕರು ಆಗಿದ್ದಾರೆ. ಇಂಥಹ ಕನಕದಾಸರು ದಾಸ ಪರಂಪರೆಯ ಶಿಷ್ಯರಲ್ಲಿ ಭಕ್ತಿ ಮತ್ತು ಕಾಯಕತ್ವದಿಂದ ಜ್ಞಾನದ ನಿಧಿಯಾಗಿ ಗೊಚರಿಸಿದರು ಎಲ್ಲೋ ಓದಿದ ನೆನಪು ಒಂದು ಕನಕದಾಸರು ಕುರಿ ಕಾಯುವ ಸಂದರ್ಭದಲ್ಲಿ ಕೊಲ್ಲಿಪುರದ ಮಹಾರಾಜರು ಕನಕದಾಸರ ಜ್ಞಾನಕ್ಕೆ ತಲೆಬಾಗಿ ಇವರನ್ನು ನೊಡಲು ಬರುತ್ತಿರುವಾಗ ಕುರಿಕಾಯುತ್ತಿದ್ದ ಕನಕದಾಸರನ್ನು ಹೀಗೆ ಪ್ರಶ್ನೆ ಮಾಡಿದ್ದಾರೆ. ದಾಸರಲ್ಲಿ ಪ್ರಮುಖ ಧಿಮಂತ ಜ್ಞಾನದ ಖಣಿ ಮತ್ತು ಕಾಲಜ್ಞಾನಿ ಎಂದು ಹೆಸರು ಪಡೆದ ಕನಕದಾಸರನ್ನು ನೋಡಿದ್ದಿಯಾ ಎಂದು ರಾಜರು ಕೆಳಿದಾಗ ಕನಕದಾಸರು ಕೊಡುವ ಉತ್ತರ "ಮುಂದೆ ಹೋಗುವನ ಹಿಂದೆ, ಹಿಂದೆ ಬರವವನ ಮುಂದೆ ಇರುವನೆ ದಾಸ ಅವನೆ ಕನಕ" ಇಲ್ಲಿ ರಾಜರು ಅವರು ಹೆಳಿದಂತೆ ಹಿಂದೆ ಮುಂದೆ ನೋಡಿದಾಗ ಕನಕದಾಸರು ಕಾಣುತ್ತಾರೆ, ಇಲ್ಲಿ ರಾಜರಿಗೆ ಭಕ್ತಿಯ ಪ್ರತೀಕವಾದರೆ ಕನಕದಾಸರಿಗೆ ನಾನೆ ಎಂಬ ಅಹಂಕಾರ ತೊರೆದು ಅವರು ನಿಡಿದ ಉತ್ತರ ಮಾರ್ಮಿಕವಾಗಿದೆ.

ದಾನಧರ್ಮ ಪರೋಪಕಾರವ ಮಾಡು
ದೀನನಾಗಿ ನೀ ಕೆಡಬೇಡವೊ
ಜ್ಞಾನವಿಲ್ಲದ ಹೀನ ದೈವವ ಭಜಿಸಿದರೆ
ಏನುಂಟು ನಿನಗಿನ್ನು ಎಲೆ ಹುಚ್ಚು ಮನ

ಇದೊಂದು ವೈಚಾರಿಕತೆಯ ಕೀರ್ತನೆ ಆಗಿದೆ. ಮನುಷ್ಯನಲ್ಲಿ ಗಳಿಸಿದ್ದೆಲ್ಲವೂ ತನಗೇ ಬೇಕು ಎನ್ನುವ ಭಾವ ಇರಬಾರದು ಅದು ಸಮಾಜಕ್ಕಾಗಿ ಅವಶ್ಯಕತೆಯುಳ್ಳವರಿಗೆ ನೀಡಬೇಕು ಎನ್ನುವ ಭಾವ ಇಲ್ಲಿದೆ. ಅದರಂತೆ ಗಳಿಸಿದ್ದೆಲ್ಲವೂ ಹೀನ ದೈವಗಳಿಗೆ ಅವುಗಳ ಸಂಪ್ರದಾಯ ಆಚರಣೆಗೆ ಖರ್ಚು ಮಾಡಬಾರದು ಜ್ಞಾನವಂತನಾಗಿ ಬದುಕಬೇಕು. ಅಜ್ಞಾನ, ಅಂಧಕಾರದಿಂದ ಮಾರಿ, ದುರ್ಗಿ, ಚೌಡಿಯರನ್ನು ಭಜಿಸುವುದನ್ನು ಅವುಗಳಿಗೆ ಕುರಿಕೋಣಗಳನ್ನು ಬಲಿಕೊಡುವುದನ್ನು ವಿರೋಧಿಸಿದ್ದಾರೆ.

ಆವ ಪರಿಯಲಿ ಸಲಹೊ ದೇವ ಚಿನ್ಮಯನೆ
ಈರೇಳು ಜನ್ಮದಿಂ ದಾಸನಾಗಿಹೆ ನಾನು
ಸೇರಿದೆನೊ ತವ ಶರಣರ ಸೇವೆಗೆ
ಘೋರ ದುರಿತಗಳೆಂಬ ವಾರಿಧಿಯ ಬತ್ತಿಸಿ
ನಾರಸಿಂಹನೆ ಕಾಯೊ ನಮ್ಮ ಕುಲಸ್ವಾಮಿ

ಭಕ್ತನ ಅಂತರಂಗದ ತಳಮಳ, ನಿವೇದನೆ ಇಲ್ಲಿದೆ. ದೇವಾ ನಾನು ನಿನ್ನ ದಾಸಾನುದಾಸ, ನೀನು ನನ್ನನ್ನು ಕೈಬಿಡದೆ ಸಾಕಿ ಸಲುಹು. ಈ ಏಳು ಜನ್ಮದಿಂದ ನಾನು ನಿನ್ನ ಸೇವಕನು ನೀನು ನನ್ನನ್ನು ರಕ್ಷಿಸು, ಸಲಹು ಎನ್ನುವ ಭಾವ ಇಲ್ಲಿದೆ.

ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ
ಪಡೆದ ಜನನಿಯ ತೆರದಿ ಸ್ವಾಮಿ ಹೋಣೆಗೀಡಾಗಿ
ಬಿಡದೆ ರಕ್ಷಿಪನು ಇದಕೆ ಸಂಶಯವಿಲ್ಲ.

ಮನುಷ್ಯ ಸಹನೆ ತಾಳ್ಮೆಯಿಂದಿರಬೇಕು. ಈ ಪ್ರಪಂಚವು ಪರಮಾತ್ಮನ ಅದ್ಬುತ ಸೃಷ್ಟಿಯಾಗಿದೆ. ಚರಾಚರಗಳೆಲ್ಲವನ್ನೂ ಹುಟ್ಟಿಸಿದ ದೇವರು ಅವೆಲ್ಲವುಗಳನ್ನೂ ಸಲುಹಬಲ್ಲಂತಹ ಹೊಣೆಗಾರನಾಗಿದ್ದಾನೆ. ಹುಟ್ಟಿಸಿದ ಶಿವ ಹುಲ್ಲು ಮೇಯಿಸುವನೆ? ಎನ್ನುವ ಸಹಜವಾದ ಮಾತೊಂದು ನಮ್ಮಲ್ಲಿದೆ. ಹಾಗೆಯೇ ಕನಕದಾಸರು ಕೂಡಾ ಮನುಷ್ಯನ ಕಳವಳಕ್ಕೆ ಅರ್ಥವಿಲ್ಲ ಎಂದಿದ್ದಾರೆ. ಬೆಟ್ಟದ, ಶಿಖರದ ತುದಿಯಲ್ಲಿ ಹುಟ್ಟಿರುವಂತಹ ವೃಕ್ಷಕ್ಕೆ ಕಟ್ಟೆಯನ್ನು ಕಟ್ಟಿ ನೀರನ್ನು ಎರೆಯುವವರು ಯಾರು? ಅಡವಿಯಲ್ಲಿ ಆಡುತ್ತಿರುವಂತಹ ಮೃಗಪಕ್ಷಿಗಳಿಗೆಲ್ಲ ಸಮಯ ಸಂದರ್ಭಕ್ಕೆ ತಕ್ಕ ಹಾಗೆ ಆಹಾರ, ನೀರು ನೀಡಿದವರು ಯಾರು? ಕಲ್ಲಿನಲಿ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ ಅಲ್ಲಲ್ಲಿಗೆ ಆಹಾರವನ್ನು ಇಟ್ಟವರು ಯಾರು? ನವಿಲಿಗೆ ಬಗೆಬಗೆಯ ಚಿತ್ರವನ್ನು ಬಿಡಿಸಿದವರೂ, ಗಿಳಿಗೆ ಹಸಿರು ಬಣ್ಣವನ್ನು ನೀಡಿದವರು ಯಾರು? ಇದನ್ನೆಲ್ಲಾ ಅರ್ಥಮಾಡಿಕೊಂಡಂತಹ ಆದಿಕೇಶವ ಎಲ್ಲರನ್ನೂ ಸಲಹುತ್ತಾನೆ ಇದಕ್ಕೆ ಸಂಶಯ ಬೇಡ ಎಂದಿದ್ದಾರೆ. ಕನಕದಾಸರಿಗೆ ದೇವರ ಮೇಲಿನ ಭಕ್ತಿ ಇಲ್ಲಿ ವ್ಯಕ್ತವಾಗುತ್ತದೆ.

ಧರ್ಮವಿಲ್ಲದ ಅರಸು ಮುರಿದ ಕಾಲಿನ ಹೊರಸು
ನಿರ್ಮಲಿಲ್ಲದ ಮನಸು ಅದು ಕಜ್ಜಿ ತಿನಸು
ಶರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡು
ಮರ್ಮವಿಲ್ಲದ ಮಾತು ಒಡಕು ಮಡಕೆ ತೂತು.

ಇದು ಜೀವನಾನುಭವದ ಕೀರ್ತನೆಯಾಗಿದೆ. ಒಬ್ಬೊಬ್ಬರಲ್ಲಿ ಒಂದೊಂದು ಗುಣವಿರಬೇಕು. ಆ ಗುಣವಿರದಿದ್ದರೆ ಬದುಕಿಗೆ ಅರ್ಥವಿಲ್ಲ. ದೇವರಿಲ್ಲದ ಗುಡಿ, ಹಾಳು ಬಿದ್ದಂತಹ ಅಂಗಡಿ, ಭಾವನೆಗಳೆ ಇಲ್ಲದ ಭಕ್ತಿ ಇವೆಲ್ಲ ಕುಹಕಯುಕ್ತಿಗೆ ಸಮಾನ, ನ್ಯಾಯ, ನೀತಿ, ಧರ್ಮ ಅನುಸರಿಸದ ರಾಜ ಕಾಲು ಮುರಿದ ಹೊರಸಿಗೆ ಸಮಾನ, ಅದು ಯಾವುದಕ್ಕೂ ಉಪಯೋಗವಿರದು ದುಡಿದು ಕೆಲಸಮಾಡದ ಪುರುಷ ಕರಿಯ ಒನಕೆಗೆ ಸಮಾನ ಮನುಷ್ಯ ಏನಾದರೂ ಮಾತನಾಡಬೇಕಾದರೆ ಅದರೊಳಗೆ ಸತ್ವವಿರಬೇಕು. ಅರ್ಥ ಗಾಂಭಿರ್ಯತೆ ಇರಬೇಕು ಇಲ್ಲದಿದ್ದರೆ ತೂತು ಬಿದ್ದ ಮಡಿಕೆಗೆ ಸಮಾನವೆಂದಿದ್ದಾರೆ.

ಮೂಗಿಡಿದು ನೀರೊಳಗೆ ಮುಳಗಿ ಓಪತಪಮಾಡಿ
ನಿಗಮಾಗಮ ಪುರಾಣಗಳೋದಿ ತಿಳಿದು
ಬಾಗಿ ಪರಸ್ತ್ರಿಯರನು ಬಯಸಿ ಕಣ್ಣಿಡುವಂಥ
ಯೋಗ ಭ್ರಷ್ಟರೆಲ್ಲ ದೇವ ಬ್ರಾಹ್ಮಣರೆ?

ಈ ವಚನದಲ್ಲಿ ಡಾಂಬಿಕ ವಿಡಂಬನೆಯನ್ನು ಕಾಣುತ್ತೇವೆ ಪುರಾಣ ಓದಿ ತಿಳಿದು ಪರಸ್ತ್ರಿಯನ್ನು ಬಯಸುವ ಯೋಗ ಭ್ರಷ್ಟರಲ್ಲಿ ದೇವ ಬ್ರಾಹ್ಮಣರೆ? ಎನ್ನುವ ಪ್ರಶ್ನೆ ಮಾಡುತ್ತಾರೆ.

ಮೃಗಗಳ ಮೈಯಲಿ ಪುಟ್ಟಿದ ಕತ್ತುರಿಯ
ತೆಗೆದು ಪೂಸುವರು ದ್ವಿಜರೆಲ್ಲರು
ಬಗೆಯಿಂದ ನಾರಯಣಸ್ವಾಮಿಕುಲ
ಅಗಜವಲ್ಲಭನ್ಯಾತರ ಕುಲದವನು

ಈ ವಚನದಲ್ಲಿ ಕುಲದ ಕುರಿತು ದೇವರು ಮತ್ತು ದೈವವನ್ನು ಪ್ರಶ್ನಿಸುವ ಕೆಲಸವನ್ನು ಮಾಡಿದ್ದಾರೆ. ಕುಲ ಕುಲವೆಂದು ಸಾಮಾಜಿಕ ಅನಿಷ್ಠತೆಯನ್ನು ಪ್ರಶ್ನಿಸುವ ಕೀರ್ತನೆ ಇದಾಗಿದೆ. ಜಾತಿವ್ಯವಸ್ಥೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿರುವ ಕನಕದಾಸರು ಅನೇಕ ದೃಷ್ಟಾಂತಗಳನ್ನು ಕೊಟ್ಟು ಸತ್ಯ ಸುಖವುಳ್ಳ ಜನರಿಗೆ ಕುಲವಿಲ್ಲವೆಂದು ಹೇಳಿದ್ದಾರೆ. ಆತ್ಮ ಯಾವ ಕಾಲ, ಜೀವ ಯಾವ ಕುಲ, ತತ್ವೇಂದ್ರಿಯಗಳ ಕುಲ ಯಾವುದೆಂದು ಪ್ರಶ್ನಿಸಿದ್ದಾರೆ ಆದಿಕೇಶವನು ಒಲಿದ ಮೇಲೆ ಕುಲವಿಲ್ಲವೆಂದು ಸಾರಿ ಹೇಳಿದ್ದಾರೆ.

ನೀರ ಮುಣಗಲು ಏಕೆ ನಾರಿಯಳ ಬಿಡಲೇಕೆ
ವಾರಕ್ಕೊಂದು ಉಪವಾಸ ಮಾಡಲೇಕೆ
ನಾರಸಿಂಹನ ದಿವ್ಯ ನಾಮವನ್ನು ನೆನೆದರೆ
ಘೊರ ಪಾತಕಲ್ಲಿ ತೊಲಗಿ ಹೋಗುವದು

ಸಮಾಜದಲ್ಲಿರುವ ಕಂದಾಚಾರ ಮೂಡನಂಬಿಕೆ ಕುರಿತು ಹೇಳುತ್ತ ವಾರಕ್ಕೊಂದು ಉಪವಾಸ ಮಾಡಿದರೆ ದೇವನೊಲಿಯುವದಿಲ್ಲ ನಾರಸಿಂಹನ ದಿವ್ಯ ನಾಮವನ್ನು ನೇನೆದರೆ ಘೋರ ಪಾರ್ತವು ಕೂಡ ತೊಲಗಿ ಹೋಗುತ್ತದೆ ಎನ್ನುವ ವಿಚಾರ ಕಾಣುತ್ತದೆ.

ಅಣು ಮಹತ್ತಿನೊಳಲ್ಲಿ ಪರಿಪೂರ್ಣ ವಿಶ್ವಮಯ
ಗಣನೆಯಿಲ್ಲದ ಮಹಾ ಮಹಿಮನೆನಿಪ
ಬಂಟನಾಗಿ ಬಾಗಿಲ ಕಾಯ್ದ ಹರಿ ವೈ
ಕುಂಠದ ಸೊಂಪಿನ ದಾಸರ ಮನೆಯ
ಇಂತೆಸೆವ ಲೀಲಾವಿನೋದ ರಚನೆಯಲಿ ಲೋ
ಕಾಂತರಗಳೆಲ್ಲವನು ಸಂತೈಸುವ
ಸಂತತವು ಭಕ್ತಿ ಸಂಸಾರವನು ಪೊರೆವ ವೇ
ದಾಂತನುತ ಕಾಗಿನೆಲೆಯಾದಿ ಕೇಶವರಾಯ
ಈಸುದೇವರ ಪಲಗಳಿದ್ದರೆ ಫಲವೇನು?
ವಾಸುದೇವನ ಬಲವಿಲ್ಲದವಗೆ

ಈ ರೀತಿಯಾಗಿ ಕನಕದಾಸರು ಭಗವಂತನ ಸ್ವರೂಪವನ್ನು ವರ್ಣಿಸಿದ್ದಾರೆ. ತನು, ಜೀವಗಳ ರಕ್ಷಕ, ದುಃಖನಿವಾರಕ, ಭಕ್ತರ ರಕ್ಷಕ, ಸೇವಕ, ಅಗಾಧ ಮಹಿಮೆಗಾರ, ಅಣು, ರೇಣು, ತೃಣಗಳಲ್ಲಿಯೂ ಹರಿ ಶಕ್ತಿ ಅಡಕ, ಹದಿನಾಲ್ಕು ಲೋಕಭರಿತ, ಭಕ್ತ ಹೃದಯವಾಸ, ತನ್ನ ಲೀಲಾವಿನೋದಕ್ಕಾಗಿ ಭೂಮಿ, ಜೀವಿ, ಸಂಸಾರ ಸೃಷ್ಟಿಸಿದಾತ, ದಯಾ ಹೃದಯ, ಕಾರುಣ್ಯಮಯಿ – ಇವೆಲ್ಲ ಕನಕದಾಸರು ವರ್ಣೀಸಿದ ಭಗವಂತನ ಗುಣಗಳು ಬಸವಣ್ಣನವರು ಮತ್ತು ಕನಕದಾಸರಲ್ಲಿಯೂ ಭಗವಂತನ ಸ್ವರೂಪ ಕುರಿತು ಬರುವ ಮುಖ್ಯ ವ್ಯತ್ಯಾಸವೆಂದರೆ – ತಮ್ಮ ಪಂಥದ ಪ್ರಕಾರ ಬಸವಣ್ಣನವರು ಹರನನ್ನು ಬಿಟ್ಟು ಉಳಿದ ದೈವಗಳನ್ನು ವರ್ಣಿಸಲಾರರು ಮಾತ್ರವಲ್ಲಿ ಅನೇಕ ಕಡೆ ಕಟು ಟೀಕೆ ಮಾಡಿದ್ದಾರೆ. ಹರಿಶ್ರೇಷ್ಠತೆ ಸಾರಲು ಹೊರಟ ಕನಕದಾಸರು ಇತರ ದೈವಗಳಿಗೆ ಸ್ಥಾನ ಕೊಡುವುದು ಮಾತ್ರವಲ್ಲ ಹರನನ್ನು ವರ್ಣಿಸುವ ಹಾಡು ಬರೆಯುತ್ತಾರೆ.

ಕುಲವಿಲ್ಲದ ದಾಸ ಕುರುಬದಾಸ ನಾನಯ್ಯ
ಕಾಳಿದಾಸನ ಮನೆಯ ಕೀಳುದಾಸ
ಆಳುದಾಸನು ನಾನು ಮೂಳದಾಸ
ದಾಸದಾಸರ ಮನೆಯ ದಾಸಿಯರ ಮಗ ನಾನು ।
ಸಾಸಿರ ನಾಮದೊಡೆಯ ರಂಗಯ್ಯ ಮನೆಯ ॥

ಎಂಬಲ್ಲಿ ಕನಕದಾಸ ತನ್ನನ್ನು ಹರಿದಾಸರ ಮನೆಯ ದಾಸನ ದಾಸಿಯ ಮಗನೆಂದು ಕರೆದುಕೊಳ್ಳುವುದಾಗಲೀ, ಶಂಕುದಾಸರ ಮನೆಯ ಮಂಕುದಾಸನು ನಾನು.......... ಎಂಬಂತಹ ನುಡಿಗಳಾಗಲೀ ಅಹಂಕಾರ ನಿರಸನಕ್ಕೆ ಸಾಕ್ಷಿಯಾಗಿವೆ. ಸರ್ವಾರ್ಪಣೆ ದ್ಯೋತ್ಯಕವಾಗಿವೆ.
ವಿದ್ವದ್ಗೋಷ್ಠಿಯಲ್ಲಿ 'ಯಾರು ಮೊದಲು ವೈಕುಂಠಕ್ಕೆ ಹೋಗಬಲ್ಲರು' ಎಂದು ಗುರು ವ್ಯಾಸರಾಯರು ಕೇಳಿದಾಗ ಕನಕದಾಸರು ಉತ್ತರಿಸಿದ – 'ನಾನು ಹೋದರೆ ಹೋದೇನು' ಎನ್ನುವ ಪ್ರಸಂಗ; 'ಯಾರೂ ಇಲ್ಲದೆಡೆ ಬಾಳೆಯ ಹಣ್ಣು ತಿಂದು ಬಾ' ಎನ್ನುವ ಪ್ರಸಂಗ; ಉಡುಪಿಯ ಶ್ರೀ ಕೃಷ್ಣನ ದರ್ಶನಕ್ಕೆ ಅರ್ಚಕರಿಂದ ಅಡ್ಡಿಯಾದಾಗ ಅವನಿದ್ದೆಡೆಗೆ ಕಿಂಡಿಯ ಮೂಲಕ ಕೃಷ್ಣನೇ ದರ್ಶನ ಕೊಟ್ಟಿರುವ ಪ್ರಸಂಗ ಅವರ ಅಹಂ ನಿರಸನ, ಭಗವದ್ಭಕ್ತಿಗೆ, ಜ್ಞಾನ, ಪ್ರತಿಭೆಯ ದ್ಯೋತಕವಾಗಿವೆ.
ಹುಟ್ಟುತೇನು ತರಲಿಲ್ಲ ಹೋಗುತ್ತೇನು ಒಯ್ಯಲಿಲ್ಲ
ಸುಟ್ಟು ಸುಟ್ಟು ಸುಣ್ಣದ ಹರಳಾಯಿತೀದೇಹ
ಹೊಟ್ಟೆ ಬಲು ಕೆಟ್ಟದೆಂದು ಎಷ್ಟು ಕಷ್ಟಪಟ್ಟು ಪ್ರಾಣ
ಬಿಟ್ಟುಹೋಗುವಾಗ ಗೇಣು ಬಟ್ಟೆ ಕಾಣಲಿಲ್ಲವೋ..

ಮನುಷ್ಯ ಹುಟ್ಟುತ ಬತ್ತಲೆ ಹೋಗುವಾಗ ಬತ್ತಲೆ ಹುಟ್ಟು ಸಾವಿನ ನಡುವಿನ ಕತ್ತಲೆ ಎನ್ನುವ ವಿಚಾರ ಈ ಮೇಲಿನ ವಚನದಲ್ಲಿ ಕಾಣುತ್ತೆವೆ, ಅತಿಯಾದ ಮೋಹ ಒಳ್ಳೆಯದಲ್ಲ ಎನ್ನುವ ವಿಚಾರ ಕಾಣಬಹುದಾಗಿದೆ.

ಆರು ಚಕ್ರದಿ ಮರವ – ಅಖಂಡನ

ಮೂರು ಗುಣವ ತಿಳಿದು
ಆರು ಮೂರು ಹದಿನಾರು ತತ್ವವ ಮೀರಿ
ತೋರುವ ಕಾಗಿನೆಲೆಯಾದಿಕೇಶವನಡಿ

ಮನುಷ್ಯನು ಬಾಳಿ ಬದುಕುವ ವಿಧಾನದ ಕುರಿತು ಆರು ಚಕ್ರದಿ ಮೆರವ – ಅಖಂಡನ ಮೂರು ಗುಣವ ತಿಳಿದುಕೊಳ್ಳಬೇಕು ಆರು ಮೂರು ಹದಿನಾರು ತತ್ವ ಮೀರಿ ತೋರುವ ಕಾಗಿನೇಲೆ ಯಾದಿಕೇಶವನಡಿಯಲ್ಲಿ ತಿಳಿದುಕೊಳ್ಳಬೇಕು ಎನ್ನುವ ಮಾತಿನ ತಾತ್ವಿಕ ಹಿನ್ನೆಲೆಯಲ್ಲಿ ಕಟ್ಟಿಕೊಡುತ್ತಾರೆ. ಇದಲ್ಲದೆ ಇವರು ರಚಿಸಿದ ಮೋಹನ ತರಂಗಿಣಿ ಶ್ರೀಕೃಷ್ಣನಿಗೆ ಎತ್ತಿದ ಆರತಿಯಂತೆ ಕಾಣುತ್ತಿದೆ. ಶೃಂಗಾರ, ಭಕ್ತಿ, ಪ್ರೇಮಗಳು ಪರಸ್ಪರ ಏಕವಾಗಿ ನಡೆಯುತ್ತಿರುವಂತೆ ಭೌತಿಕ ಹಾಗೂ ಲೌಕಿಕಗಳನ್ನು ಒಂದನ್ನೊಂದು ಕೈಹಿಡಿದುಕೊಂಡಿವೆ ಅನ್ನುವುದು ಈ ಸಂದಾನದ ಮುಖಾಂತರ ಕಂಡುಬರುತ್ತಿವೆ. ಮಾನವ ಪ್ರಪಂಚದಲ್ಲಿ ಎರಡು ರೀತಿಯಾದ ವಾದವನ್ನು ಕಾಣುತ್ತೆವೆ. ಒಂದು ಭೌತಿಕವಾದ ಎರಡನೆಯದು ಭಾವನವಾದ ಈ ಎರಡು ವಾದಗಳು ಕನಕದಾಸರ ಸಾಹಿತ್ಯಿಕ, ಸೈದ್ದಾಂತಿಕ ಹಾಗೂ ಸಮಾಜಮುಖಿ ಚಿಂತನೆಯಲ್ಲಿ ಬಹಳಷ್ಟು ಕಿರ್ತನೆಗಳು ಸಾಕ್ಷಿಯಾಗಿ ನಿಂತಿದ್ದನ್ನು ನಾವು ಕಾಣುತ್ತೇವೆ.

ಕನಕದಾಸರು ನೂರಾರು ಕೀರ್ತನೆಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ ಅವುಗಳ ಅಂತರಂಗವನ್ನು ಹೊಕ್ಕು ನಾವು ಮುನ್ನುಗ್ಗಬೇಕಾಗುತ್ತದೆ. ಕನಕದಾಸರು ಹೆಣ್ಣು-ಹೊನ್ನು-ಮಣ್ಣು ಈ ಮೂರನ್ನು ತಿರಸ್ಕರಿಸಿದ್ದಾರೆ. ಸಾಮಾಜಿಕ ಮತ್ತು ಧಾರ್ಮಿಕ ಪಿಡುಗುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ 'ಕಾಲವೆನ್ನುವುದು ಥಲ' ಎನ್ನುವುದಾಗಿ ತಿಳಿಯುತ್ತದೆ. ದೈವಬಲ ಮತ್ತು ದೈವಕರುಣೆಗಳಿಗೆ ದಾಸರು ತಮ್ಮ ಜೀವನದಲ್ಲಿ ಬೆಲೆಯಿತ್ತಿದ್ದಾರೆ.

ಕನಕದಾಸರ ಆಧ್ಯಾತ್ಮಯಾತ್ರೆ ಅಮೃತ ಸದೃಶವಾದುದು, ಎಲ್ಲ ಸಾಧಕರ ಸಾಧನೆಗಿಂತ ವಿಭಿನ್ನವಾದುದು, ಆದ್ದರಿಂದಲೇ ಅವರು ನಿತ್ಯ ಸ್ಮರಣೀಯರು. ಕಾಲದಾಚೆಗೆ ನಿಂತು ಕಾಲವನ್ನು ಕಂಡವರು, ಯಾವ ಸಮಕಾಲೀನ ದಾಸರಿಗೂ ಸಾಧ್ಯವಾಗದ ಸಿದ್ಧಿ ಸಾಕ್ಷಾತ್ಕಾರಗಳು ಈ ದಾಸರಿಗೆ ಮಾತ್ರ ಅನ್ನುವುದು ನಿಮಿಸಲಾದ, "ದೇವರನಾಮ ಎಂಬುದೊಂದು ಬೌತಿ ಮತ್ತು ಅಂತಹ ಮುತ್ತು ಕೇರಿಗೆ ಬಂದಿದೆ ಜ್ಞಾನವೆಂಬ ದಾರದಲ್ಲಿ ಪೋಣಿಸಿದ ಮತ್ತು ಜ್ಞಾನಗಳ ಮನದಲ್ಲಿ ಮೆರೆವ ಮತ್ತು ಇದು ಶ್ರೀನಿಧಿ ಆದಿಕೇಶವನೆಂಬ ಮುತ್ತು ಇದು ಮಾನವನ ಅಂತರಂಗದಲ್ಲಿ ಬೆಳಗುತ್ತಿರಬೇಕು ಹೊಳೆಯುತ್ತಿರಬೇಕು ಎಂದು ಭಕ್ತಿಗಾಗಿ ಹಂಬಲಿಸುತ್ತಾರೆ. ಕನಕದಾಸರು ನಮ್ಮ ನಡುವಿನ ಶಿಕ್ಷಾಗುರು ಮಾತ್ರವಲ್ಲ ಮೋಕ್ಷಾ ಗುರುವೂ ಕೂಡ, ಮೋಕ್ಷ ಎನ್ನುವುದು ಸತ್ತಮೇಲೆ ಸಿಗುವಂತದ್ದಲ್ಲ ಅದು ಬದುಕಿರುವಾಗಲೇ ಪಡೆಯುವ ಬಿಡುಗಡೆಯ ಉಪಾದಿ ಅಂತಹ ಸಿದ್ಧಿಯ ಸತ್ಫಲವೇ ಬಿಡುಗಡೆಯ ಮೋಕ್ಷ. ಅದನ್ನೇ ಕನಕದಾಸರು "ನಾನು ನೀನು ಅನ್ನದಿರೋ ಹೀನ ಮಾನವ ಜ್ಞಾನದಿಂದ ನಿನ್ನ ನೀನು ತಿಳಿದು ನೋಡೆಲೋ ಅನ್ನುತ್ತಲೇ ಕೊನೆಯಲ್ಲಿ ಕೀಲು ಓಡಿದ ತೊಗಲು ಗೊಂಬೆ ನೀನೆಲೋ ಲೋಲ ಆದಿಕೇಶವನ ಭಕ್ತನಾಗೆಲೋ" ಎಂದಿದ್ದಾರೆ.

ಆತ್ಮನಿವೇದನೆ, ಸಮಾಜ ವಿಮರ್ಶೆ, ಲೋಕನೀತಿ ಇವರ ಕೃತಿಗಳಿಗೆ ಆಹಾರಗಳಾಗಿವೆ. ಇಲ್ಲಿ ಬರುವ ಹಾಡಿನಲ್ಲಿ ಕಣ್ಣೆ ಕಾಮನ ಬೀಜ ಈ ಕಣ್ಣೀನಿಂದಲೇ ನೋಡೋ ಮೋಕ್ಷ ಸಾಮ್ರಾಜ್ಯ. ಮನುಷ್ಯ ಪಾಪರಹಿತನಾಗಬೇಕು. ಜ್ಞಾನ ಬೆಳಕಿನಲ್ಲಿ ಓಡಾಡಬೇಕು. ಎಂದು ಅವರ ಆಶಯವಾಗಿತ್ತು. ನೈತಿಕ ಜೀವನಕ್ಕೆ ಬಹಳ ಮಹತ್ವದ ಸ್ಥಾನವನ್ನು ನೀಡಿದ್ದರು ದಾಸರು, 'ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೇ?, ಜನ್ಮ ಸಾರ್ಥಕವಿಲ್ಲದವರೆಲ್ಲ ಭಾಗ್ಯವಂತರೆ? ಎಂದು ಕೇಳುತ್ತಾರೆ ದಾಸರು. ಯಾವ ಧರ್ಮದವನಾದರೇನು? ಆ ಧರ್ಮದ ರಹಸ್ಯವನ್ನು, ತಿರುಳನ್ನು ಅರಿತು, ಅಳವಡಿಸಿಕೊಂಡವನೇ ಸಾರ್ಥಕ ಜೀವನವನ್ನು ಕಂಡು ಕೊಳ್ಳುತ್ತಾನೆ. ಸೇವಾನುಭವವೇ ಸರ್ವಸಾಧನೆಗಳಿಗೂ ಸ್ಫೂರ್ತಿಯ ಸೆಲೆ ಎಂದರು. ಧರ್ಮದ ಸಮಾನ ತತ್ವಗಳನ್ನು ಸಾಮಾನ್ಯರಿಗೂ ತಿಳಿಯುವಂತೆ ಬೋಧಿಸಿದರು.

ದಾಸ ಪರಂಪರೆಯಲ್ಲಿ ಕನಕದಾಸರು ಭಕ್ತಿ ಮತ್ತು ಕಾಯಕತ್ವದಿಂದ ಜ್ಞಾನದ ಕಣಿಯಾಗಿ ಗೋಚರಿಸುತ್ತಾರೆ. ಅವರ ಕೀರ್ತನೆಗಳಲ್ಲಿ ಧಾರ್ಮಿಕ ಮತ್ತು ಲೌಕಿಕ ಚಿಂತನೆಗಳೊಂದಿಗೆ ಸಮಾಜೋಧಾರ್ಮಿಕ ಹಿನ್ನೆಲೆಯುಳ್ಳಂತ ವಿಚಾರಗಳನ್ನು ಗುರುತಿಸಬಹುದು ಕನಕದಾಸರು ತಮ್ಮ ಕಿರ್ತನೆಗಳಲ್ಲಿ ಜಾತಿ, ಕುಲಗಳನ್ನು ಮೀರಿ ಮನುಷ್ಯತ್ವವನ್ನು ಪ್ರತಿಪಾದಿಸಿದ್ದಾರೆ.